**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900 / 2023**

**ಚಾಸಾ ಃ- 07 / ಪ್ರಾಸಾ ಃ- 07**

| | |
|---|---|
| ಹೆಸರು | **ಡಾಃ ಅಭಿಜೀತ್** |
| ತಂದೆಯ ಹೆಸರು | **ಹನುಮಂತಾಕುಮಾರ್** |
| ವಯಸ್ಸು | **37 ವರ್ಷ** |
| ಉದ್ಯೋಗ | **ವೈದ್ಯಾಧಿಕಾರಿಗಳು, ಕುಣಿಗಲ್ ಸರ್ಕಾರಿ ಆಸ್ಪತ್ರೆ** |
| ವಿಳಾಸ | **ನೆಲಮಂಗಲ** |

**ದಿನಾಂಕಃ 21-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಮಾರ್ಚ್-2021 ರಿಂದ ಆಗಸ್ಟ್-2023 ರವರೆಗೆ ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 06-06-2023 ರಂದು ಸುಮಾರು ಮಧ್ಯಾಹ್ನ 2.44 ರ ಸಮಯದಲ್ಲಿ ಗೌರಮ್ಮ ಕೋಂ ನಿಂಗಯ್ಯ, 35 ವರ್ಷ, ಉಡುವೆಗೆರೆ ಇವರು ನಿಂಗಯ್ಯ ಎಂಬುವರೊಂದಿಗೆ ನಿಂಗಯ್ಯ ಎಂಬುವರು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರರಿಗೆ

1. Right elbow 2 X 1 C.M. with bleeding.
2. Contusion over head 4 X 3 C.M.
3. Abrasion on left knee 3 X 2 C.M.
4. Abrasion near Clavicle left side in and around neck 3 X 2 C.M. ಗಾಯ ಕಂಡು ಬಂದಿರುತ್ತದೆ.

ದಿನಾಂಕಃ 06-06-2023 ರಂದು ಸುಮಾರು ಮಧ್ಯಾಹ್ನ 2.34 ರ ಸಮಯದಲ್ಲಿ ಕೆಂಪಮ್ಮ ಕೋಂ ಚಿಕ್ಕಬಸವಯ್ಯ, 72 ವರ್ಷ, ಉಡುವೆಗೆರೆ ಇವರು ನಿಂಗಯ್ಯ ಎಂಬುವರೊಂದಿಗೆ ನಿಂಗಯ್ಯ ಎಂಬುವರು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರಿಗೆ

1. Lacerated Wound on Right Temporal Area measuring 3 X 2 C.M. bleeding.

2. Lacerated Wound on occipital area measuring 3 X 2 C.M. bleeding ಗಾಯಗಳು ಕಂಡು ಬಂದಿರುತ್ತದೆ.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಈಗ ಸಾಕ್ಷಿಗೆ ಗಾಯದ ಪ್ರಮಾಣಪತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರಗಳನ್ನು ನಿಪಿ-3 ಮತ್ತು ನಿಪಿ-4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ರಲ್ಲಿ ನಮೂದಿಸಿರುವ ಗಾಯಗಳ ಸ್ವರೂಪಗಳು ದೊಣ್ಣೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲು** ಃ- **ಶ್ರೀ. ವಿ.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಯಾವುದಾದರೂ ಒರಟಾದ ನೆಲದ ಮೇಲೆ ಬಿದ್ದರೆ ಗಾಯದ ಪ್ರಮಾಣಪತ್ರಗಳಲ್ಲಿ ನಮೂದಿಸಿರುವಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಅನುಕೂಲವಾಗಲೀ ಎಂದು ಸುಳ್ಳು ಗಾಯದ ಪ್ರಮಾಣಪತ್ರಗಳನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ರಕ್ತದ ಕಲೆ ಆದ ಬಟ್ಟೆಗಳನ್ನು ನೀವು ಪಡೆಯುತ್ತಿರೋ ಅಥವಾ ಇಲ್ಲವೋ ಎಂದರೆ ಸಾಕ್ಷಿ ನಾವು ಪಡೆಯುವುದಿಲ್ಲ, ಪೋಲಿಸರು ಪಡೆಯುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ

ಕ್ರಿಮಿನಲ್ ಪ್ರಕರಣ ಸಂಖ್ಯೆ **: 3900 / 2023**

ಚಾಸಾ :-8 ಪ್ರಾಸಾ :-8

| | |
|---|---|
| ಹೆಸರು | **ಕೃಷ್ಣಪ್ಪ** |
| ತಂದೆ ಹೆಸರು | **ವೆಂಕಟರಮಣಪ್ಪ** |
| ವಯಸ್ಸು | **53** |
| ಉದ್ಯೋಗ | **ಎ.ಎಸ್.ಐ. ಮಾಗಡಿ ಪೋಲಿಸ್ ಠಾಣೆ** |
| ವಿಳಾಸ | **ಮಾಗಡಿ ಟೌನ್** |

**ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ನಾನು 2021 ರಿಂದ ಇಲ್ಲಿಯವರೆವಿಗೂ ಮಾಗಡಿ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 07-06-2023 ರಂದು ನಾನು ಠಾಣಾ ಪ್ರಭಾರದಲ್ಲಿರುವಾಗ ಮಧ್ಯಾಹ್ನ 12 ಗಂಟೆಯ ಸಮಯದಲ್ಲಿ ಮಾಗಡಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋವನ್ನು ಪರಿಶೀಲಿಸಿದಾಗ್ಯೂ ಮಾಗಡಿ ತಾಲ್ಲೂಕು ಉಡುವೆಗೆರೆ ಗ್ರಾಮದ ಕೆಂಪಮ್ಮ ಎಂಬುವರು ಗಾಯಗಳಾಗಿ ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿದಿರುತ್ತದೆ. ನಂತರ ನಾನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿನ ವೈದ್ಯಾಧಿಕಾರಿಯವರಿಗೆ ಕೆಂಪಮ್ಮ ನವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದರೋ ಅಥವಾ ಇಲ್ಲವೋ ಎಂದು ತಿಳಿದುಕೊಳ್ಳಲು ಮನವಿಪತ್ರವನ್ನು ನೀಡಿರುತ್ತೇನೆ. ಆಗ ಅಲ್ಲಿನ ವೈದ್ಯಾಧಿಕಾರಿಗಳು ಸದರಿ ಕೆಂಪಮ್ಮ ನವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾರೆಂದು ತಿಳಿಸಿರುತ್ತಾರೆ. ಅದರಂತೆ ನಾನು ಸದರಿ ಕೆಂಪಮ್ಮನವರ ಹೇಳಿಕೆಯನ್ನು ವೈದ್ಯಾಧಿಕಾರಿಯವರ ಸಮಕ್ಷಮ ಪಡೆದುಕೊಂಡು ಮಧ್ಯಾಹ್ನ 1 ಗಂಟೆಗೆ ಠಾಣೆಗೆ ಬಂದು ಠಾಣಾ ಮೊಕದ್ದಮ್ಮೆ ಸಂ-120/2023 ರಂತೆ ಕಲಂ-323 324 504 506 ರ ಐಪಿಸಿ ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಪಿಸಿ-778 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ ಹಾಗೂ ಇನ್ನೊಂದು ಪ್ರತಿಯನ್ನು ಮೇಲಾಧಿಕಾರಿಯವರಿಗೆ ಮೇಲ್ ಮಾಡಿರುತ್ತೇನೆ. ಈಗ ಸಾಕ್ಷಿಗೆ ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಹೇಳಿಕೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರಲ್ಲಿರುವ

ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಅದೇ ದಿವಸ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 09-06-2023 ಕೃತ್ಯ ಸ್ಥಳದ ಪಂಚನಾಮೆಗಾಗಿ ಮಾನ್ಯ ಮಾಗಡಿ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಮನವಿಪತ್ರ ನೀಡಿ ಚಾಸಾ-2 ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ಚಾಸಾ-2 ರವರು ಒಂದು ನೀಲಗಿರಿ ದೊಣ್ಣೆಯನ್ನು ಹಾಜರು ಪಡಿಸಿದ್ದು ಅದನ್ನು ಪರಿಶೀಲಿಸಲಾಗಿ ಸದರಿ ದೊಣ್ಣೆಯು ಮೂರುವರೆ ಅಡಿ ಉದ್ದದ ನೀಲಗಿರಿ ದೊಣ್ಣೆ ಆಗಿತ್ತು. ಸದರಿ ದೊಣ್ಣೆಯನ್ನು ಮುಂದಿನ ತನಿಖೆಗಾಗಿ ಅಮಾನತು ಪಡಿಸಿಕೊಂಡಿರುತ್ತೇನೆ. ಈಗ ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಸ್ಥಳ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಎಂ.ಓ-1 ನ್ನು ತೋರಿಸಲಾಗಿ ಸದರಿ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ದಿಃ 10-06-2023 ರಂದು ಚಾಸಾ-2 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 26-07-2023 ರಂದು ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣಪತ್ರವನ್ನು ಚಾಸಾ-7 ರವರಿಂದ ಪಡೆದುಕೊಂಡಿರುತ್ತೇನೆ ಮತ್ತು ಅದೇ ದಿವಸ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಈಗ ಸಾಕ್ಷಿಗೆ ನಿಪಿ-3 ಮತ್ತು 4 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಮತ್ತು ನಿಪಿ-4(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು** :- ಶ್ರೀ. **ವಿ.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ :-

ದಿನಾಂಕಃ 07-06-2023 ರಂದು ಆಸ್ಪತ್ರೆಯಿಂದ ನಿಮಗೆ ಯಾವುದೇ ಮೆಮೋ ಬಂದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ಚಾಸಾ-1 ಮತ್ತು 2 ರವರಿಗೂ ಯಾವುದೇ ಗಾಯ ಆಗಿರುವುದಿಲ್ಲ ಹಾಗೂ ಅವರು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ಚಾಸಾ-1 ರವರು ನಿಮಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಮತ್ತು ನೀವು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಯಾವುದೇ

ಕೃತ್ಯ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಸ್ಥಳ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಂ.ಓ-1 ನ್ನು ನೀವು ಸೃಷ್ಟಿಸಿರುವ ದೊಣ್ಣೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಕೃತ್ಯ ನಡೆದ ಜಮೀನಿನ ಪಹಣಿಯನ್ನು ನೀವು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವುದೇ ರೀತಿ ಘಟನೆ ನಡೆದಿರುವುದಿಲ್ಲ ಆ ಕಾರಣದಿಂದ ನೀವು ಚಾಸಾ-1 ಮತ್ತು 2 ರವರ ಬಟ್ಟೆಯನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ದೊಣ್ಣೆಯನ್ನು ಅಮಾನತು ಪಡಿಸಿಕೊಂಡಿರುತ್ತೇನೆಂದು ನುಡಿಯುತ್ತಾರೆ. ಎಂ.ಓ-1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-2 ರಿಂದ ಚಾಸಾ-4 ರವರ ಹೇಳಿಕೆ ಪಡೆದುಕೊಳ್ಳಲು ಯಾವುದೇ ನೋಟಿಸ್ ನೀಡಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಚಾಸಾ-3 ರಿಂದ ಚಾಸಾ-6 ರವರು ಬೇರೆ ಊರಿನವರಾಗಿದ್ದು ಅವರು ಬೇರೆ ಕೆಲಸಕ್ಕೆ ನಿಮ್ಮ ಠಾಣೆಗೆ ಬಂದಾಗ ಅವರ ಸಹಿ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಅನುಕೂಲವಾಗಲೀ ಎಂದು ಸರಿಯಾಗಿ ತನಿಖೆ ಮಾಡದೇ ಆರೋಪಿ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಠಾಣೆಯ ಅಂಕಿಅಂಶಗೋಸ್ಕರ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.